# ಸ್ವಾಮಿ ವಿವೇಕಾನಂದರ ಜೀವನ ಮತ್ತು ಸಂದೇಶಗಳಲ್ಲಿ ನಾನು ಮೆಚ್ಚುವ ಅಂಶಗಳು

ಕುಮಾರಿ ಅನ್ನಪೂರ್ಣ. ಪಿ

ಕಳೆದ ವರ್ಷ ಏರ್ಪಡಿಸಲಾಗಿದ್ದ 'ವಿವೇಕಪ್ರಭ' ಪ್ರಬಂಧ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನವನ್ನು ಪಡೆದ ಈ ಪ್ರಬಂಧವನ್ನು ಬರೆದಿರುವ ಕುಮಾರಿ ಅನ್ನಪೂರ್ಣ ಪಿ. ಬಳ್ಳಾರಿಯ ಆಯುರ್ವೇದ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ

"ಸ್ವಾಮಿ ವಿವೇಕಾನಂದ" ಈ ಹೆಸರು ನೆನೆದೊಡನೆಯೆ ಮೈಪುಳಕಗೊಂಡು ಮನವು ದಿವ್ಯತೆಯೆಡೆಗೆ ಸಾಗಿ, ನರನಾಡಿಗಳಲ್ಲಿ ವಿದ್ಯುತ್‌ಸಂಚಾರವಾಗಿ, ಹೃದಯಾಂತರಾಳದಲ್ಲಿ ಸುಪ್ತವಾಗಿರುವ 'ದೇಶಪ್ರೇಮ' ಮತ್ತು 'ತ್ಯಾಗಭಾವ' ಪುಟಿದೇಳದಿದ್ದರೆ ಅಂಥವರನ್ನು ಭಾರತೀಯ ಎನ್ನಲಾಗುವುದಿಲ್ಲ. ಇದು ಉತ್ಪ್ರೇಕ್ಷೆಯಾಗದು. ನಿಜವಾಗಿಯೂ ಭಾರತೀಯತೆ, ನಾವು ಭಾರತೀಯರೆಂಬ ಅಭಿಮಾನ, ಇಂದಿಗೂ ದೇಶಪ್ರೇಮದ ಮಹಾಜ್ಯೋತಿಯು ನಮ್ಮ ಹೃದಯಗಳಲ್ಲಿ ಜ್ವಲಂತವಾಗಿರುವುದೆ ಇದಕ್ಕೆ ಸಾಕ್ಷಿ. ಆ ದಿವ್ಯಚೇತನ ಸ್ವಾಮಿಜಿಯವರ ರೂಪತಾಳಿ ಬಾರದಿದ್ದರೆ, ನಮ್ಮ ಜೀವನ ಎತ್ತ ಕಡೆ ಸಾಗಿರುತ್ತಿತ್ತು? ಬಹುಶಃ ಇದು ಊಹಾತೀತ. ಅವರ ದಿವ್ಯಜೀವನ, ಭವ್ಯ ಸಂದೇಶಗಳು ಭಾರತಮಾತೆಯ ಮಡಿಲಲ್ಲಿರುವ ನಮ್ಮೆಲ್ಲರಿಗೆ ದೊರೆತ ತಪೋಫಲ, ಅಮೂಲ್ಯವಾದ ವರ. ಇಂತಹ ದೇಶಭಕ್ತ ವಿರಾಗಿ, ತ್ಯಾಗಮಯಿಯನ್ನು ಪಡೆದ ಹೇ ಭಾರತಮಾತೆ ನೀನೆ ಧನ್ಯೆ! ಧನ್ಯೆ!




ಈ ಪುಣ್ಯಭೂಮಿಯಲ್ಲಿ ಹುಟ್ಟಿ, ಎಂದಿಗೂ ನಾವು ಭಾರತೀಯ ಎಂಬ ಕಿಚ್ಚನ್ನು ಎದೆಯಲ್ಲಿ ಹೊತ್ತಿಸಿದ ಆ 'ಎಚ್ಚೆತ್ತ ಚೇತನ'ಕ್ಕೆ ಮುಗಿವೆಂಬುದಿಲ್ಲ. ದೇಶಪ್ರೇಮದಲ್ಲಿ, ತ್ಯಾಗಜೀವನದಲ್ಲಿ, ಸೇವಾಪಥದಲ್ಲಿ ಸ್ವಂತ ಮುಕ್ತಿಯನ್ನೂ ಕಡೆಗಾಣಿಸಿ, ಭರತಖಂಡದ ಉದ್ಧಾರಕ್ಕಾಗಿ ತಾನು ಕೋಟಿಕೋಟಿ ಜನ್ಮಗಳನ್ನೆತ್ತಿ ಬರುವುದಾಗಿ ಸಾರಿ, 'ದರಿದ್ರದೇವೋ ಭವ! ಮೂರ್ಖದೇವೋ ಭವ!' ಎನ್ನುವ ದಿವ್ಯ ಮಂತ್ರಗಳಲ್ಲಿ ಸ್ವಾಮಿಜಿ ಅಮರ! ಅಮರ!

ಜೀವಚೈತನ್ಯ ತುಂಬುವ ಜೀವನದಲ್ಲಿ

ಮಾನವ ಜೀವಿಗಳಲ್ಲಿ ಅನಂತ ಜೀವನೋತ್ಸಾಹವನ್ನು ತುಂಬುವ ಅಮೃತ ಚಿಲುಮೆಯ ಜೀವನ ಅವರದು. ಹೌದು, ನಾವು ಅಮೃತ ಪುತ್ರರು, ದೈವತ್ವವು ನಮ್ಮ ಅಂತರಾಳದಲ್ಲಿ ಅಡಗಿದೆ. ಆದರೆ ನಾವು ಕುರಿಗಳ ಹಿಂಡಿನಲ್ಲಿರುವ ಸಿಂಹದ ಮರಿಯಂತೆ ಜೀವಿಸುತ್ತಿರುವೆವು. ನಮ್ಮ ಜೀವನ ತುಚ್ಛವಾದುದಲ್ಲ. ಜಗತ್ತಿನ ಒಡೆಯನಾದ ಭಗವಂತನು ನಮ್ಮ ಜೀವನವನ್ನು ತೇಜೋಮಯವಾಗಿಸದೆ, ಅಂಧಕಾರದಲ್ಲಿ ತೊಳಲಾಡಲು ಬಿಡುವನೆ? ನಮ್ಮಲ್ಲಿ ಅಡಗಿರುವ ದಿವ್ಯತೆಯನ್ನು ಪ್ರಕಟಪಡಿಸಲು, ದಿವ್ಯಪುರುಷನ ವೇಷ ಧರಿಸಿ, ಭಗವಂತನು ಶಿವಾಂಶಸಂಭೂತನಾದ ನರೇಂದ್ರನ ರೂಪದಲ್ಲಿ ಜನ್ಮ ತಾಳಿದನು.

ಸಪ್ತರ್ಷಿ ಮಂಡಲದಿಂದ ಶ್ರೀಗುರು ರಾಮಕೃಷ್ಣರ ಕರೆಗೆ ಧರೆಗಿಳಿದು ಬಂದು, ಆರ್ಯಮಾತೆಯ ಕೀರ್ತಿಯನ್ನು ನರೇಂದ್ರ ವಿಶ್ವದೆಲ್ಲೆಡೆ ಪಸರಿಸಿದರು. ಜನ್ಮಭೂಮಿಯಲ್ಲಿ ಮತ್ತೊಮ್ಮೆ ಜ್ಞಾನಸೂರ್ಯನು ಪ್ರಕಾಶಮಾನವಾಗುವಂತೆ ಮಾಡಲು ತನ್ನ ಚೈತನ್ಯವನ್ನು ಪ್ರತಿಯೊಬ್ಬರ ಹೃದಯಮಂದಿರದಲ್ಲಿ ಜ್ಞಾನ ದೀವಿಗೆಯಾಗಿ ಸದಾ ರಾರಾಜಿಸುವಂತೆ ಬೆಳಗಿದರು. ಅವರ ಜೀವನ ಚೈತನ್ಯಮಯ, ತ್ಯಾಗಮಯ. ಅವರ ಜೀವನದ ತಳಹದಿ ಅನುಷ್ಠಾನವೇದಾಂತ. ಅವರ ಜೀವನಶೈಲಿಯೇ ಸಂದೇಶ. ಮುಂದೆ ಭವ್ಯ ಭಾರತವನ್ನು ನಿರ್ಮಾಣ ಮಾಡಲು ಉದ್ಯುಕ್ತವಾದ ಅವರ ಬಾಲ್ಯದ ಬದುಕು ಬಂಧುರವಾದ ಅಮೂಲ್ಯ ಮೌಲ್ಯಗಳನ್ನು ಒಳಗೊಂಡಿತ್ತು. ಬಾಲ್ಯದಿಂದಲೇ ಅವರಿಗೆ ತ್ಯಾಗ, ಕರುಣೆ, ಸೇವೆ, ಸತ್ಯಪಥ, ಸತ್ಯಶೋಧನೆ, ಯಾವುದಕ್ಕೂ ಅಂಜದ, ಯಾವುದನ್ನೂ ಪರೀಕ್ಷಿಸದೆ ಒಪ್ಪಿ ಕೊಳ್ಳದ ಮನೋಭಾವವನ್ನು ಅವರ ತಂದೆತಾಯಿಗಳು ರೂಪಿಸಿದರು. ವಿಶ್ವಮಾನವನನ್ನು ಪಡೆಯಲು ಪರಂಪರೆಯ ಪುಣ್ಯಫಲದ ಜೊತೆಗೆ ಮಾತೆ ಭುವನೇಶ್ವರಿ ದೇವಿಯು ಕಾಶಿ ವೀರೇಶ್ವರನಿಗೆ ಮಾಡಿದ ಪೂಜಾಫಲವೂ ಸೇರಿತ್ತು.

ಸ್ವಾಮಿ ವಿವೇಕಾನಂದರ ಬಾಲ್ಯ ಜೀವನದಲ್ಲಿನ ಅನೇಕ ಘಟನೆಗಳನ್ನು ಪರಾಮರ್ಶಿಸಿದರೆ, ಅವರೊಬ್ಬ ಜನ್ಮಸಿದ್ಧರೆಂಬ ಅಂಶ ಮನದಟ್ಟಾಗುತ್ತದೆ. ಆಟಕ್ಕಾಗಿ ಕುಳಿತು ಧ್ಯಾನ ಮಾಡಿದರೂ ಸಹ ಅವರಲ್ಲಿ ಮೂಡಿದ ತನ್ಮಯತೆ, ಎಷ್ಟೋ ವರ್ಷಗಳ ಸಾಧನೆಯನ್ನು ಮಾಡಿದ್ದರೆ ತಾನೇ ಲಭಿಸುವುದು? ಯಾವುದಕ್ಕೂ ಮಣಿಯದ ಅವರ ತುಂಟತನವು ಕೇವಲ ಶಿವನಾಮ ಉಚ್ಚಾರದಿಂದ ಮಾತ್ರವೇ ತಟಸ್ಥವಾಗುವುದಕ್ಕೆ ಏನು ಕಾರಣ?

ಆ ದೈವಾಂಶಸಂಭೂತವಾದ ಮಗುವಿನಲ್ಲಿ ಆಗಲೇ ವಿವಿಧ ಮತದವರಿಗೆ "ವಿವಿಧ ಹುಕ್ಕಾಗಳು ಏಕೆ?" ಎಂದು ಪ್ರಶ್ನಿಸುವ ದಿಟ್ಟತನ, ಕೈಗೆ ಸಿಕ್ಕ ಸಾಮಾನುಗಳನ್ನೆಲ್ಲ ಸಾಧು-ಸಂತರಿಗೆ ದಾನ ಮಾಡುವ ಕರುಣೆ- ಹೀಗೆ ಅವರು ಅಸಂಖ್ಯಾತ ಗುಣಗಳ ಗಣಿಯಾಗಿದ್ದರು.

ವಿದ್ಯಾರ್ಥಿಜೀವನದಲ್ಲಿ ಅವರು ಕೇವಲ ವಿದ್ಯಾಭ್ಯಾಸವಲ್ಲದೆ, ಇನ್ನಿತರ ಚಟುವಟಿಕೆಗಳಲ್ಲಿಯೂ ಮುಂದಾಗಿರುವುದನ್ನು ಕಾಣುತ್ತೇವೆ. ನಾಯಕತ್ವ, ಗಂಭೀರ ವ್ಯಕ್ತಿತ್ವದ ಜೊತೆಜೊತೆಗೆ ಅವರ ಹಾಸ್ಯಮಯ ವರ್ತನೆಗಳು ಅವರ ಸ್ನೇಹಿತರನ್ನು ಆಕರ್ಷಿಸಿದ್ದವು. ಇಂದಿನ ತರುಣರ ಜೀವನವಾಹಿನಿಯಲ್ಲಿ ಆಧ್ಯಾತ್ಮಿಕ ಭಾವನೆಯನ್ನು ತುಂಬಿದ ಅವರ ತಾರುಣ್ಯವು, ಉತ್ಸಾಹಭರಿತವಾಗಿ ಸತ್ಯಾನ್ವೇಷಣೆಯ ಪಥದಲ್ಲಿ, ನಿರಂಕುಶ ಮತಿಯಾಗಿ ಅಧ್ಯಾತ್ಮಸೂರ್ಯನ ಜ್ಞಾನದೆಡೆಗೆ ಸಾಗಿತು.

ಮೊದಲು ಸಂನ್ಯಾಸಿಯಾಗಿ ಸದಾ ಧ್ಯಾನಾನಂದದ ಸಮಾಧಿ ಸ್ಥಿತಿಯಲ್ಲಿಯೇ ಮುಳುಗಿರುವ ಆಸೆಯನ್ನು ಸ್ವಾಮಿ ವಿವೇಕಾನಂದರು ಹೊಂದಿದ್ದರು. ಆದರೆ ಶ್ರೀಗುರುಗಳ ಅಪ್ಪಣೆಯಂತೆ ಭಾರತಮಾತೆಯ ಕೀರ್ತಿಯನ್ನು ಬೆಳಗುವುದರಲ್ಲಿ, ಪ್ರತಿಯೊಬ್ಬರಲ್ಲಿ ಅಡಗಿರುವ ದಿವ್ಯತೆಯನ್ನು ಪ್ರಕಟಪಡಿಸುವುದರಲ್ಲಿಯೇ ಧ್ಯಾನಾನಂದಕ್ಕಿಂತಲೂ ಉನ್ನತವಾದ ಆನಂದವನ್ನು ಪಡೆದರು. ಭರತಖಂಡದ ಉದ್ಧಾರಕ್ಕಾಗಿ ಕೋಟಿ ಜನ್ಮಗಳನ್ನೆತ್ತಿ ಬರುವೆನೆಂದು ಸಾರಿ ಹೇಳಿದ ದೇಶಭಕ್ತ ವಿರಾಗಿಯನ್ನು ಪಡೆದ ಭಾರತಾಂಬೆಯ ಮಡಿಲಲ್ಲಿ ಹುಟ್ಟಿರುವ ನಾವು ಅದೆಷ್ಟು ಧನ್ಯರು ಎಂಬ ಭಾವ ಮೂಡುತ್ತದೆ.

ಸ್ವಾಮಿ ವಿವೇಕಾನಂದರನ್ನು ವಿಶ್ವವಿಖ್ಯಾತಗೊಳಿಸಿದ ಚಿಕಾಗೋ ಉಪನ್ಯಾಸದಲ್ಲಿನ ಮೊದಲ ವಾಕ್ಯದ ಸರ್ವಸೋದರ ಭಾವಕ್ಕೆ ಸಾಕ್ಷಿಯಾಗಿ ಮೊಳಗಿದ ಕರತಾಡನವು, ಸಂಕುಚಿತ ಪಂಥಭಾವನೆ, ಸ್ವಮತಾಭಿಮಾನ ಮತ್ತು ಮತಾಂಧತೆಯನ್ನು ದೂರಮಾಡುವ ಶಂಖನಾದವಾಗಿ ಮೊಳಗಿತು. ಅಂದಿನಿಂದಲೇ ಹೊಸ ಧರ್ಮವೊಂದರ ಸೃಷ್ಟಿಯಾಯಿತು. ಇಲ್ಲಿ ಒಬ್ಬ ಕ್ರೈಸ್ತ, ಹಿಂದೂ ಅಥವಾ ಬೌದ್ಧನಾಗಬೇಕಾಗಿಲ್ಲ, ಹಿಂದೂ ಕ್ರೈಸ್ತನಾಗಬೇಕಾಗಿಲ್ಲ. ಪ್ರತಿಯೊಬ್ಬನೂ ಇತರರ ಮನೋಭಾವಕ್ಕೆ ಮಹತ್ವವನ್ನು ಕೊಡುವುದರ ಜೊತೆಗೆ ತನ್ನ ವೈಯಕ್ತಿಕತೆಯನ್ನು ಉಳಿಸಿಕೊಂಡು, ತನ್ನ ನಿಯಮಗಳನ್ನು ಅನುಸರಿಸುತ್ತ ಜೀವನ ರೂಪಿಸಿಕೊಳ್ಳುವಂತಾಗಬೇಕು.

ಅವರು ವಿಶ್ವವಿಖ್ಯಾತರಾದ ಮೇಲೆಯೂ ಸಹ ಅತ್ಯಂತ ಸರಳ ಜೀವನ ನಡೆಸುತ್ತಿದ್ದರು. ಅದಕ್ಕೆ ನಿದರ್ಶನವಾದ ಒಂದು ಘಟನೆಯನ್ನು ಮಿಸೆಸ್ ಬ್ಲಾಡ್ಜೆಟ್ ಅವರ ಪತ್ರದಲ್ಲಿ ಕಾಣಬಹುದು. ಅವರು ಸದಾ ಅಧ್ಯಯನದಲ್ಲಿ ಮುಳುಗಿರುತ್ತಿದ್ದರು. ಆದರೆ ಕೆಲವೊಮ್ಮೆ, ಅವರು ಅಡುಗೆ ಮನೆಗೆ ನುಗ್ಗಿ "ಈಗ ನಾವು ಅಡುಗೆ ಮಾಡೋಣ" ಎಂದು ಬಾಲಕನ ಸರಳತೆಯನ್ನು ತಳೆಯುತ್ತಿದ್ದರು. ಅಮೆರಿಕದಲ್ಲಿ ಭಾರತದ ಬಗ್ಗೆ ಕೇಳುವ ವಿಚಿತ್ರ ಪ್ರಶ್ನೆಗಳಿಗೆ ಅಷ್ಟೇ ವಿಚಿತ್ರವಾಗಿ, ಕೆಲವೊಮ್ಮೆ ಹಾಸ್ಯಮಯವಾಗಿ ಉತ್ತರಿಸುತ್ತಿದ್ದರು.

ಹೀಗೆ ವಿವೇಕಾನಂದರು ಭೋಗಭೂಮಿಯಿಂದ ತ್ಯಾಗಭೂಮಿಗೆ ಮರಳಿ, ಶ್ರೀರಾಮಕೃಷ್ಣ ಮಹಾಸಂಘವನ್ನು ಸ್ಥಾಪಿಸಿದರು. ಜೀವಿಗಳಲ್ಲಿ ಜೀವಚೈತನ್ಯ ಇರುವವರೆಗೆ ಜ್ಞಾನಚೈತನ್ಯ ಪ್ರವಾಹ ಹರಿಯುವಂತೆ ಮಾಡಿದರು.

## ಜಡತ್ವ-ಅಂಧಕಾರವನ್ನು ಸೀಳುವ ಸಿಡಿಲಿನ ಸಂದೇಶಗಳಲ್ಲಿ

ಸ್ವಾಮಿ ವಿವೇಕಾನಂದರ ಸಂದೇಶಗಳ ಇಡೀ ಮೊತ್ತವೇ ಅವರ ಜೀವನ. ಜೀವನಕ್ಕೂ, ಸಂದೇಶಕ್ಕೂ ಇಲ್ಲಿ ಅಂತರವಿಲ್ಲ. ಅವರು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳದ ಯಾವುದೇ ಸಿದ್ಧಾಂತ ಅವರ ಸಂದೇಶಗಳಲ್ಲಿ ಕಂಡುಬರುವುದಿಲ್ಲ. ಅವರು ಕೇವಲ ಸಂದೇಶಗಳನ್ನು ನೀಡುವುದರಲ್ಲಿ ತೃಪ್ತರಾಗಿರಲಿಲ್ಲ, ಬದಲಾಗಿ ಅವುಗಳ ಅನುಷ್ಠಾನಕ್ಕೆ ಮಹತ್ವ ಕೊಟ್ಟರು. ದೀನದಲಿತರಿಗಾಗಿ ತುಡಿಯುವ ಅವರ ಹೃದಯವೇದನೆ ಕೇವಲ ಅಶ್ರುಧಾರೆಯಾಗಿ ಸುರಿಯದೆ, ಅವರನ್ನು ಪ್ರಗತಿಪಥದಲ್ಲಿ ನಡೆಸುವಂತೆ, ಕರೆದೊಯ್ಯುವಂತೆ ಮಾಡಿತು. ಅನೇಕ ಸೇವಾ ಕಾರ್ಯಗಳನ್ನು ಮಾಡಲು ಯುವಕರನ್ನು ಹುರಿದುಂಬಿಸುವಲ್ಲಿ ಹಾತೊರೆಯಿತು ಅವರ ಹೃದಯ. ಅಂತಹ ಹೃದಯಸ್ಪಂದನ ಸಂದೇಶಗಳಲ್ಲಿ ಕೆಲವನ್ನು ಗಮನಿಸುವುದಾದರೆ:

"ಜೀವನಾವಧಿ ಅಲ್ಪ, ಪ್ರಾಪಂಚಿಕ ವಿಷಯಗಳೆಲ್ಲ ಕ್ಷಣಿಕ. ಆದರೆ ಇತರರಿಗಾಗಿ ಯಾರು ಬಾಳುತ್ತಾರೋ ಅವರೇ ನಿಜವಾಗಿ ಬಾಳುವವರು. ಉಳಿದವರು ಜೀವನ್ಮೃತರು."

"ಪರಹಿತಕ್ಕಾಗಿ ನಿಮ್ಮ ಜೀವನವನ್ನು ಮುಡಿಪಾಗಿಡಿ, ನೀವು ತ್ಯಾಗಜೀವನವನ್ನು ಆರಿಸಿಕೊಳ್ಳುವುದಾದರೆ ಸೌಂದರ್ಯ, ಹಣ, ಅಧಿಕಾರಗಳ ಕಡೆ ತಿರುಗಿಯೂ ನೋಡಬೇಡಿ."

"ಒದೆಯುವ, ಹಠಮಾರಿ ಮಗುವಿನ ಗಂಟಲಿಗೆ ಔಷಧ ಗಿಡಿಯಲು ಯತ್ನಿಸುವ ವೈದ್ಯರು ನೀವಾಗುವಿರಾ?" ಎಂದು ಪ್ರಶ್ನಿಸುತ್ತಾ, ತಮಗೆ ಒಳಿತನ್ನು ಮಾಡಹೊರಟವರ ಮೇಲೆಯೇ ಎದುರುಬೀಳುವ, ನಿರ್ಜೀವವಾದಂಥ ಜನಸಮೂಹಕ್ಕೆ ಜೀವದಾನ ಮಾಡುವ ಸಂದೇಶ ನೀಡುತ್ತಾರೆ. ಆದರೆ ಅವರು ಸುಧಾರಣೆಯನ್ನು ನಂಬುವುದಿಲ್ಲ, ಬೆಳವಣಿಗೆಯನ್ನು ನಂಬುತ್ತಾರೆ. 'ನಾನು ದೇವರ ಸ್ಥಾನದಲ್ಲಿ ನಿಂತು ಸಮಾಜಕ್ಕೆ 'ನೀನು ಹೀಗೆ ಚಲಿಸಬೇಕು. ಹಾಗಲ್ಲ' ಎಂದು ಅಪ್ಪಣೆ ಮಾಡಲಾರೆ. ತನ್ನ ಪಾಲಿನ ಮರಳುಕಣವನ್ನೇ ಸೇತುವೆಯ ಮೇಲೆ ಹಾಕಿ ತೃಪ್ತವಾದ ಅಳಿಲಿನಂತೆ ಶ್ರೀರಾಮನ ಸೇತುವೆಯ ಅಳಿಲು ನಾನಾಗಬಯಸುತ್ತೇನೆ" ಎನ್ನುವ ಭಾವ ಅವರದು.

**ಜಾತಿ–ಮತಾಂಧತೆಯ ವಿರುದ್ಧ ಸಿಂಹಘರ್ಜನೆ ಮಾಡಿದ ಅವರು ಆತ್ಮವತ್ ಸರ್ವಭೂತೇಷು** ಎನ್ನುವ ಉಪದೇಶ ಕೇವಲ ಪುಸ್ತಕದಲ್ಲೇ ಉಳಿಯಬೇಕೆ?—ತುಣುಕು ರೊಟ್ಟಿ ನೀಡಿ ಹಸಿದ ಹೊಟ್ಟೆಯನ್ನು ತುಂಬದಿದ್ದರೆ ಅವರೆಂಥ ಮುಕ್ತಿಯನ್ನು ನೀಡಬಲ್ಲರು? ಇತರರ ಉಸಿರಿನ ಸ್ಪರ್ಶದಿಂದಲೇ ಅಶುದ್ಧರಾಗಿಬಿಡುವವರು ಇತರರನ್ನು ಶುದ್ಧಗೊಳಿಸುವುದೆಂತು? 'ಮುಟ್ಟಬೇಡಿ' ಎಂಬುದು ಒಂದು ಮಾನಸಿಕ ರೋಗ" ಎನ್ನುತ್ತಾರೆ.

ಅವರ ಸಂದೇಶಗಳಲ್ಲಿ ಮಹತ್ವವಾದುದೆಂದರೆ "ಅನುಕರಣೆ ನಾಗರಿಕತೆಯಲ್ಲ. ಭಯಾನಕ ಹೀನ ಮಟ್ಟದ ಚಿಹ್ನೆಯದು. ಕಲಿಯಲು ಒಪ್ಪದವನು ಸತ್ತಂತೆ. ಒಳಿತಾದುದೆಲ್ಲವನ್ನು ಇತರರಿಂದ ಕಲಿಯಬೇಕು. ಆದರೆ ನಿಮ್ಮದೇ ಆದ ರೀತಿಯಲ್ಲಿ ಅದನ್ನು ಸ್ವೀಕರಿಸಿರಿ, ಎಂದೂ ಇತರರಾಗಬೇಡಿ" ಎನ್ನುವ ಸಂದೇಶ ಪ್ರತಿಯೊಬ್ಬರಲ್ಲಿ ಹೃದಯವಿಕಾಸಕ್ಕೆ ಕಾರಣವಾಗಿದೆ. ಭಾರತೀಯರಲ್ಲಿ ಆತ್ಮಾಭಿಮಾನವನ್ನು ತುಂಬುತ್ತಾ, ಅವರು ಜಗತ್ತಿನ ಏಳ್ಗೆಗಾಗಿ ಕೊಟ್ಟ ಈ ಸಂದೇಶ ಸ್ಮರಣೀಯ.

"ಜಗತ್ತಿನ ಜನರಿಗೆ ಒಳಿತನ್ನು ಮಾಡುತ್ತ ಹಳ್ಳಿಯಿಂದ ಹಳ್ಳಿಗೆ ಹೋಗಿರಿ. ಇತರರಿಗೆ ಮುಕ್ತಿಯನ್ನು ತರುವ ಸಲುವಾಗಿ ನರಕಕ್ಕೆ ಹೋಗಲು ಸಿದ್ಧರಾಗಿ! ಸಾವು ಎಂದಾದರೊಂದು ದಿನ ಬಂದೇ ಬರುವುದು. ಮರ, ಕಲ್ಲುಗಳಂತೆ ನಾಶವಾಗುವುದಕ್ಕಿಂತ ವೀರನಂತೆ ಮರಣವನ್ನಪ್ಪುವುದು ಲೇಸಲ್ಲವೇ? **ತುಕ್ಕು ಹಿಡಿದು ಹಾಳಾಗುವುದಕ್ಕಿಂತ ಸವೆದು ಸಾರ್ಥಕವಾಗುವುದು ಲೇಸಲ್ಲವೇ?**" ಎನ್ನುತ್ತಾರೆ ಸ್ವಾಮಿಜಿ.

ಹೌದು, ನಾವು ಯಾರಿಗೆ ತಾನೇ ಸಹಾಯ ಮಾಡಬಲ್ಲೆವು? ಅವರು ಹೇಳುವಂತೆ ನಮ್ಮ ಮನಸ್ಸಿನಿಂದ 'ಸಹಾಯ' ಎನ್ನುವ ಶಬ್ದವನ್ನು ತೆಗೆಯಬೇಕು. "ಭಗವಂತನಿಗೋಸ್ಕರ ದುಡಿಯುವ ಅವಕಾಶ ಲಭ್ಯವಾದುದರಿಂದ ನಾವು ಧನ್ಯರು ಎಂದುಕೊಳ್ಳಬೇಕು. ರೋಗಿಯ ರೂಪದಲ್ಲಿ, ಹುಚ್ಚರ ರೂಪದಲ್ಲಿ, ಕಷ್ಟದಲ್ಲಿರುವವನ ರೂಪದಲ್ಲಿ, ಪಾಪಿಯ ರೂಪದಲ್ಲಿ ಬಂದು ಭಗವಂತ ತನ್ನ ಸೇವೆಗೆ ಅವಕಾಶ ಮಾಡಿಕೊಡುತ್ತಾನೆ."

ಹೀಗೆ ಅವರ ಅನಂತ ಸಂದೇಶಗಳ ರಾಶಿಯಲ್ಲಿ ಕೊನೆಯದಾಗಿ ಆರಿಸಲ್ಪಟ್ಟ ಸಂದೇಶವು ಭಾರತಮಾತೆಯ ತಿಲಕದಂತೆ ಸದಾ ಶೋಭಿಸುತ್ತದೆ: "ಭಾರತವನ್ನು ಮೇಲೆತ್ತಲು ಸಾಧ್ಯವಾಗುವುದು ಮಾಂಸಖಂಡದ ಬಲದಿಂದಲ್ಲ, ದೈಹಿಕ, ಭೌತಿಕ ಶಕ್ತಿಗಳಿಂದಲ್ಲ, ಆದರೆ ಆತ್ಮಶಕ್ತಿಯಿಂದ. ವಿನಾಶದ ಧ್ವಜವನ್ನು ಹಾರಿಸಬೇಡಿ. ಶಾಂತಿ ಮತ್ತು ಪ್ರೇಮದ ಧ್ವಜವನ್ನು ಹಾರಿಸಿ. ಸಂನ್ಯಾಸಿಯು ಧರಿಸುವ ಕಾವಿಯ ಅರುಣವರ್ಣದಿಂದ ಅದು ಮೇಲೇರುವುದು. ಸಂಪತ್ತಿನ **ಶಕ್ತಿಯಿಂದಲ್ಲ, ತ್ಯಾಗಶಕ್ತಿಯಿಂದ** ಮೇಲೇರುವುದು."

"ಭವಿಷ್ಯದ ಮಹಾನ್ ಭಾರತನಿರ್ಮಾಣದ ರಹಸ್ಯ ಅಡಗಿರುವುದು ಜನರು **ಸಂಘಟಿತರಾಗಿ** ವ್ಯವಸ್ಥಿತ ರೀತಿಯಿಂದ ದುಡಿಯುವಲ್ಲಿ, ಶಕ್ತಿಯ ಸಂಗ್ರಹದಲ್ಲಿ, ನಮ್ಮೆಲ್ಲರ ಇಚ್ಛಾಶಕ್ತಿಯ ಸಹಕಾರದ ಸಮನ್ವಯದಲ್ಲಿ" ಎನ್ನುತ್ತಾರೆ ಸ್ವಾಮಿಜಿಯವರು. ನಿಜವಾಗಿಯೂ ಭವಿಷ್ಯ ಭಾರತದ ನಿರ್ಮಾಣವು ನಮ್ಮ ಕಾಯಕವನ್ನಾಧರಿಸಿದೆ. ಅಂತಹ ಕಾಯಕಕ್ಕೆ ಶಕ್ತಿಯನ್ನು ನೀಡುವ ಸ್ಫೂರ್ತಿಯ ಚಿಲುಮೆಯಾಗಿವೆ ಅವರ ಸಂದೇಶಗಳು.

ಸ್ವಾಮಿ ವಿವೇಕಾನಂದರ ಹೆಮ್ಮೆಯ ದೇಶವಾದ ಭಾರತಾಂಬೆಯ ಮಡಿಲಲ್ಲಿ ಹುಟ್ಟಿ, ಅವರನ್ನು ನೆನೆಯುವ ಸೌಭಾಗ್ಯವನ್ನು ಪಡೆದಿರುವುದೇ ನನ್ನ ಪುಣ್ಯ.

### ವಿಭುವೊಬ್ಬನೆ

ನನ್ನಲ್ಲಿ ನಿನ್ನಲ್ಲಿ, ಎಲ್ಲೆಂದರಲ್ಲಲ್ಲಿ
ಒಡವ, ಬಲ್ಲಿದರಲ್ಲಿ
ಚಿನ್ಮಯಾನಂದ ತಾ ವಿಭುವೊಬ್ಬನೆ ॥ ೧ ॥
ಇಳೆಯಲ್ಲಿ ಮಳೆಯಲ್ಲಿ
ಬೆಳೆಯಲ್ಲೂ ಅವನೆ
ಉದಕದಲ್ಲಿರುವ ಆ ವಿಭುವೊಬ್ಬನೆ ॥ ೨ ॥
ಇಂದ್ರನಲಿ, ಚಂದ್ರನಲಿ
ಗ್ರಹ, ಉಪಗ್ರಹಗಳಲಿ
ಜಗವ ಬೆಳಗುವ ಆ 'ಆದಿತ್ಯ'ನೆ ॥ ೩ ॥
ಓಂಕಾರವು ಅವನೆ
ಝೇಂಕಾರವು ಅವನೆ
ಸರ್ವಾಂತರ್ಯಾಮಿ ತಾ ವಿಭುವೊಬ್ಬನೆ ॥ ೪ ॥
ಶಾಂತಾತ್ಮನು ಅವನೆ
ಉಗ್ರರೂಪನು ಅವನೆ
ದಿವ್ಯಸ್ವರೂಪಿ ಆ ವಿಭುವೊಬ್ಬನೆ ॥ ೫ ॥
ಪುರುಷನಲ್ಲೂ ಅವನೆ
ಮಾಯೆಯೂ ಅವನೆ
ಬ್ರಹ್ಮಾಂಡದೊಳಗಿನ ಸರ್ವವೂ ಅವನೆ ॥ ೬ ॥
ಸುಜ್ಞಾನದಲ್ಲೂ ಅವನೆ
ವಿಜ್ಞಾನದಲ್ಲೂ ಅವನೆ
'ಸರ್ವಜ್ಞ' ತಾ ವಿಭುವೊಬ್ಬನೆ ॥ ೭ ॥
ಪ್ರಜಾಪತಿ, ಹಿರಣ್ಮಯನು ಅವನೆ
ಸೃಷ್ಟಿಕರ್ತ ವಿಶ್ವಕರ್ಮನು ಅವನೆ
ಸರ್ವೋತ್ತಮ ದೈವ ಅವನೊಬ್ಬನೆ ॥ ೮ ॥
ವ್ಯಕ್ತದಲ್ಲೂ ಅವನೆ
ಅವ್ಯಕ್ತದಲ್ಲೂ ಅವನೆ
'ಸ್ವಯಂಭು'ವಾದ ಆ ವಿಭುವೊಬ್ಬನೆ ॥ ೯ ॥
ಹಿಂದಿದ್ದವನು ಅವನೆ
ಮುಂದಿರುವವನು ಅವನೆ
ಅವನಿಲ್ಲದೆ ನಡೆಯದು ವಿಶ್ವದ ಚಲನೆ ॥ ೧೦ ॥

—ಡಿ.ಎಸ್. ಕೃಷ್ಣಾಚಾರ್ಯ, ಇಲವಾಲ